ಅ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳುವ ಕ್ರಮವೇನು ?

ಶ್ರೀ ವೈ.ಕೆ. ರಾಮಯ್ಯ (ತೋಟಗಾರಿಕೆ ರಾಜ್ಯ ಸಚಿವರು). —

ಅ) ಹೌದು

ಆ) ೧೯೮೬-೮೮ನೇ ಸಾಲಿನಲ್ಲಿ ಒಟ್ಟು ೧೭೫೫೦ ವಿವಿಧ ಜಾತಿಯ ಗಿಡಗಳನ್ನು ಉತ್ಪಾದಿಸುವ ಗುರಿ ಹೊಂದಲಾಗಿದ್ದು ಇವುಗಳಲ್ಲಿ ೧೧೫೦ ಕಸಿಗಿಡಗಳಾದ ಮಾವು, ಸೀಬೆ ಮತ್ತು ಸಪೋಟಗಳನ್ನು ಮತ್ತು ೧೬೪೦೦ ಬೀಜದಿಂದ ಉತ್ಪಾದಿಸುವ ವಿವಿಧ ಜಾತಿಯ ಗಿಡಗಳನ್ನು ಬೆಳೆಯುವ ಗುರಿ ಹೊಂದ ಲಾಗಿದೆ. ಇದಲ್ಲದೆ ೨೫೦೦೦ ಮಾವಿನ ಓಟಿಗಳನ್ನು ಸಹ ಬಿತ್ತನೆ ಮಾಡಲಾಗಿದೆ.

ಮಾಧ್ಯಮಿಕ ಶಾಲಾ ಸಹಾಯಕ ಶಿಕ್ಷಕರ ವೇತನ ಕುರಿತು

೪೦೫. ಶ್ರೀ ಯು ಭೂಪತಿ (ಸಂಡೂರು)).—ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾಧ್ಯಮಿಕ ಶಾಲಾ ಸಹಾಯಕ ಶಿಕ್ಷಕರ ಮೂಲ ವೇತನಕ್ಕೂ ಮುಖ್ಯೋಪಾಧ್ಯಾಯರ ಮೂಲ ವೇತನಕ್ಕೂ ಇರುವ ವ್ಯತ್ಯಾಸವೆಷ್ಟು :

ಆ) ಈ ಪ್ರಮಾಣದ ವ್ಯತ್ಯಾಸವನ್ನು ಸರಿಪಡಿಸಲು ಸರ್ಕಾರಕ್ಕೆ ಶಿಕ್ಷಕರ ಸಂಘದಿಂದ ಮನವಿಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ ಮೂಲ ವೇತನದಲ್ಲಿ ಉಂಟಾಗಿರುವ ವ್ಯತ್ಯಾಸವನ್ನು ಸರಿಪಡಿಸಲು ಸರ್ಕಾರ ದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ರೂ. ೫೦೦-೦೦ (ಐದು ನೂರು ಮಾತ್ರ)

ಆ) ಹೌದು

ಇ) ಸರ್ಕಾರದ ಮಟ್ಟದಲ್ಲಿ ಈಗಾಗಲೇ ವೇತನ ತಾರತಮ್ಯ ಸಮಿತಿಯು ರಚನೆಯಾಗಿದ್ದು, ವೇತನಗಳಲ್ಲಿ ಉಂಟಾದ ವ್ಯತ್ಯಾಸಗಳ ಬಗ್ಗೆ ಪರಿಶೀಲಿಸಲಾಗುತ್ತಿದೆ.

ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಬಗ್ಗೆ

೫೮೧. ಶ್ರೀ ಎಂ.ಎಲ್. ಉಸ್ತಾದ್ (ಬಿಜಾಪುರ). —ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಸಂಖ್ಯೆ ಎಷ್ಟು? ಜಿಲ್ಲಾವಾರು ವಿವರಗಳನ್ನು ನೀಡುವುದು.

ಆ) ಈ ಶಾಲೆಗಳಲ್ಲಿ ಬಿಜಾಪುರ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಖಾಲಿ ಇರುವ ಉರ್ದು ಮತ್ತು ಮರಾಠಿ ಶಿಕ್ಷಕರ ಸಂಖ್ಯೆ ಎಷ್ಟು? (ಪ್ರತ್ಯೇಕವಾದ ಮಾಹಿತಿಯನ್ನು ನೀಡುವುದು)

ಇ) ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರಲು ಕಾರಣಗಳೇನು?

ಈ) ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಈ ಹುದ್ದೆಗಳನ್ನು ತುಂಬಲು ಕೂಡಲೇ ಕ್ರಮತೆಗೆದುಕೊಳ್ಳಲಾಗುವುದೇ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು). —

ಅ) ೫೬೦೫ (ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದೆ).

ಆ)	ಖಾಲಿ ಇರುವ ಉರ್ದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ	ಖಾಲಿ ಇರುವ ಮರಾಠಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ
೧. ಬಿಜಾಪುರ	—	೧೧
೨. ಬೆಳಗಾಂ	೨೨	೩೩

೫) ಜಿಲ್ಲಾ ಆಯ್ಕೆ ಸಮಿತಿಗಳ ಮೂಲಕ ನೇಮಕಾತಿ ನಡೆಸಲು ನಿಯಮಾವಳಿಗಳ ರಚನೆ ಮತ್ತು ಜಿಲ್ಲಾ ಆಯ್ಕೆ ಸಮಿತಿಗಳು ನೇಮಕಗೊಂಡಿರದ ಕಾರಣ.

ಈ) ಸ್ವಲ್ಪ ಮಟ್ಟಿಗೆ ತೊಂದರೆ ಆಗಿರುವುದು ನಿಜ.

ಉ) ಜಿಲ್ಲಾ ಆಯ್ಕೆ ಸಮಿತಿಗಳ ಮೂಲಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವನ್ನು ಈಗಾಗಲೇ ತೆಗೆದುಕೊಳ್ಳಲಾಗಿದೆ.

ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಜಿಲ್ಲಾವಾರು ವಿವರಗಳು

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಒಟ್ಟು ಖಾಲಿ ಹುದ್ದೆಗಳು	ಈ ಖಾಲಿ ಹುದ್ದೆಗಳಲ್ಲಿ ಸಂಬಂಧಪಟ್ಟ ಇಲಾಖೆಗೆ ಸಲ್ಲಿಸಿರುವ ಅಭ್ಯರ್ಥಿಗಳು ಲಭ್ಯರಿರುವ ಹುದ್ದೆಗಳ ಸಂಖ್ಯೆ	ಭರ್ತಿಯಾಗದೆ ಉಳಿದಿರುವ ಹುದ್ದೆಗಳು
೧	೨	೩	೪	೫
೧.	ಬೆಂಗಳೂರು ಗ್ರಾಮಾಂತರ	೪೫೦	೨೮೩	೧೬೭
೨.	ಕೋಲಾರ	೪೬೯	೨೮೨	೧೮೭
೩.	ತುಮಕೂರು	೩೧೭	೨೦೬	೧೧೧
೪.	ಶಿವಮೊಗ್ಗ	೪೩೨	೩೮೨	೫೦
೫.	ಚಿತ್ರದುರ್ಗ	೨೯೭	೧೫೬	೧೪೧
೬.	ಮೈಸೂರು	೨೬೪	೨೨೯	೩೫
೭.	ಮಂಡ್ಯ	೩೭೮	೨೦೯	೧೬೯
೮.	ಹಾಸನ	೪೧೨	೩೮೮	೧೦೪
೯.	ಚಿಕ್ಕಮಗಳೂರು	೩೧೧	೨೩೮	೭೩
೧೦.	ದಕ್ಷಿಣ ಕನ್ನಡ	೧೪೩	೧೦೪	೩೯
೧೧.	ಕೊಡಗು	೮೨	೫೩	೨೯
೧೨.	ಬೆಳಗಾಂ	೩೭೦	೨೦೧	೧೬೯
೧೩.	ಬಿಜಾಪುರ	೨೦೪	೧೨೬	೭೮
೧೪.	ಧಾರವಾಡ	೩೩೦	೨೮೧	೪೯
೧೫.	ಉತ್ತರ ಕನ್ನಡ	೨೧೪	೧೧೧	೧೦೩
೧೬.	ಗುಲ್ಬರ್ಗಾ	೩೩೫	೨೦೪	೧೩೧
೧೭.	ರಾಯಚೂರು	೨೮೪	೧೮೨	೧೦೪
೧೮.	ಬೀದರ್	೯೭	೭೭	೨೦
೧೯.	ಬಳ್ಳಾರಿ	೨೧೬	೧೦೬	೧೧೦
	ಒಟ್ಟು	೫,೬೦೫	೩,೭೨೬	೧,೮೭೯